# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಹಾವೇರಿ

## ಪ್ರಕರಣ ಸಂಖ್ಯೆ: ಎಸ್.ಸಿ. ನಂ.30/2026

Pw-03

Cw-04

| | |
|---|---|
| ಸಾಕ್ಷಿದಾರರ ಹೆಸರುಃ | ಕುಮಾರಿ ಶಂಕರಮ್ಮ ಕಂಬಳಿ |
| ತಂದೆ:ಗಂಡನ ಹೆಸರುಃ | ಶ್ರೀ ಶಿವಮೂರ್ತಪ್ಪ |
| ವಯಸ್ಸುಃ | 22 ವರ್ಷ |
| ಉದ್ಯೋಗಃ | ಮನೆ ಕೆಲಸ |
| ವಾಸ ಸ್ಥಳಃ | ಭೈರಾಪುರ, ತಾಃ ಸವಣೂರು |

**ದಿನಾಂಕ:03.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ಪಿರ್ಯಾದಿ ಮತ್ತು ಆರೋಪಿ ನನ್ನ ಸಂಬಧಿಕರು. ನಾನು ಯಾವುದೇ ಜಗಳವನ್ನು ನೋಡಿಲ್ಲ ಮತ್ತು ಜಗಳ ಬಿಡಿಸಿಲ್ಲ. ಆರೋಪಿಯು ಪಿರ್ಯಾದಿಗೆ ಬೈದಿರುವುದನ್ನು ಮತ್ತು ಕುಡಗೋಲಿನಿಂದ ಹೊಡೆದಿರುವುದನ್ನು ಹಾಗೂ ಪ್ರಾಣ ಬೆದರಿಕೆ ಹಾಕಿರುವುದನ್ನು ನಾನು ನೋಡಿರುವುದಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಪಿ.ಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷಿ ವಿಚಾರಣೆಯನ್ನು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ)

**ಪಾಟೀ ಸವಾಲುಃ ಪಿ.ಪಿ ರವರಿಂದಃ**

2. ದಿನಾಂಕಃ04.02.2025 ರಂದು ಸಂಜೆ 6.00 ಗಂಟೆ ಸಮಯದಲ್ಲಿ ಚಾಸಾ-1 ರವರು ಅವರ ಜಮೀನಿನಲ್ಲಿ ನೀರು ಹಾಯಿಸಲು ಪೈಪುಗಳನ್ನು ಕಿತ್ತು ಹಚ್ಚುತ್ತಿದ್ದಾಗ ನ್ಯಾಯಾಲಯದ ಮುಂದಿರುವ ಆರೋಪಿಯು ಅವರ ಜಮೀನಿಗೆ ಏಕಾಏಕಿ ಅತಿಕ್ರಮ ಪ್ರವೇಶ ಮಾಡಿ ಆತನಿಗೆ ಲೇ ಹಾದರಗಿತ್ತಿ ಮಗನಾ, ನಮ್ಮ ಹೊಲದಾಗ ದಾರಿ ಮಾಡಿಕೊಂಡು ಓಡಾಡುತ್ತಿದ್ದೀಯಾ ಅಂತಾ ಅವಾಚ್ಯ ಶಬ್ದಗಳಿಂದ ಬೈದು, ಚಾಸಾ-1 ರವರನ್ನು ಕುರಿತು ನಿನ್ನನ್ನು ಬಿಟ್ಟರೆ ಹೊಲದಲ್ಲಿ ದಾರಿ ಮಾಡಿಕೊಂಡು ಓಡಾಡುತ್ತೀಯಾ ಎಂದು ಆತನನ್ನು

ಸಾಯಿಸಿಬಿಡಬೇಕೆಂದು ಕೊಲೆ ಮಾಡಬೇಕೆಂಬ ಉದ್ದೇಶದಿಂದ ತನ್ನ ಕೈಯಲ್ಲಿದ್ದ ಕುಡಗೋಲಿನಿಂದ ಚಾಸಾ–1 ರವರ ತಲೆಗೆ ಮತ್ತು ಕುತ್ತಿಗೆಗೆ ಹೊಡೆದು ಗಾಯಪಡಿಸಿ ಎಡಗೈ ಕಿರು ಬೆರಳು ಹಿಡಿದು ಮುರಿದು, ತೀವ್ರ ವಾಗಿ ಗಾಯಗೊಳಿಸಿ ಇನ್ನೊಮ್ಮೆ ಹೊಲದಲ್ಲಿ ದಾರಿ ಮಾಡಿಕೊಂಡು ಓಡಾಡಿದರೆ ನಿನ್ನನ್ನು ಜೀವಂತ ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿರುತ್ತಾನೆ ಎಂದರೆ ಸರಿಯಲ್ಲ.

3. ನಾನು ಮತ್ತು ಚಾಸಾ–5 ಮತ್ತು 6 ರವರು ಗಲಾಟೆಯನ್ನು ಕಣ್ಣಾರೆ ನೋಡಿ, ಜಗಳವನ್ನು ಬಿಡಿಸಿರುತ್ತೇವೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೊಲೀಸರ ಮುಂದೆ ವಿವರವಾದ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನನ್ನ ಹೇಳಿಕೆಯನ್ನು ನಿಪಿ–6 ಎಂದು ಗುರುತಿಸಲಾಯಿತು. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ನಿಪಿ–6 ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿ ಜೊತೆ ಪ್ರಕರಣವನ್ನು ರಾಜೀ ಮಾಡಿಕೊಂಡು ಆತನಿಗೆ ಸಹಾಯ ಮಾಡುವ ಸಲುವಾಗಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಪಿ.ಆರ್.ಎಂ ವಕೀಲರಿಂದಃ**

ಮಾನ್ಯ ವಕೀಲರು ಹಾಜರಿದ್ದು, ಪಾಟೀ ಸವಾಲು ಏನೂ ಇಲ್ಲ ಎಂದು ನುಡಿದಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.